ರಾಜಕಾರಣ ಇದೆಯಲ್ಲ – ಅದು ನಮ್ಮ ಓದನ್ನೂ ಬರಹವನ್ನೂ ಇನ್‌ಫ್ಲುಯೆನ್ಸ್ ಮಾಡ್ತಿರುತ್ತೆ ಅನ್ನಿಸುತ್ತದೆ. ಏನನ್ನು ಓದಬೇಕು? ಹೇಗೆ, ಯಾಕೆ ಓದಬೇಕು? ಎನ್ನುವುದನ್ನು ಕಾಲ ನಿರ್ಣಯಿಸುತ್ತಾ ಹೋದರೆ, ಆ ಕಾಲದ ಒತ್ತಡಗಳು ಓದುಗರ ಮೇಲೆ ಯಾವ ಪರಿಣಾಮವನ್ನು ಉಂಟುಮಾಡುತ್ತವೆ? ಅಡಿಗರ ಕಾವ್ಯ ಮಹತ್ವದ್ದು ಎನ್ನಿಸಿದರೂ ಅವರ ಕವಿತೆಗಳನ್ನು ಓದುವವರ ಸಂಖ್ಯೆ ಏಕೆ ಕಡಿಮೆಯಾಗುತ್ತಿದೆ? ಇದು ಸಂವಹನದ ಸಮಸ್ಯೆಯಾ ಅಥವಾ ಮಾರ್ಜಿನಲೈಸೇಷನ್ನಾ? ಯಾವುದನ್ನು ಪಕ್ಕಕ್ಕೆ ಸರಿಸಬೇಕು ಅಥವಾ ಮುನ್ನೆಲೆಗೆ ತರಬೇಕು ಎನ್ನುವುದನ್ನು ತೀರ್ಮಾನಿಸುವುದು ಯಾವುದು? ಹೀಗೆ ನಿರ್ಧರಿಸುವ ರಾಜಕೀಯ, ಓದಿನ ಆರೋಗ್ಯದ ಮೇಲೆ ಉಂಟುಮಾಡುವ ಪರಿಣಾಮ ಯಾವುದು? ತೇಜಸ್ವಿ–ಲಂಕೇಶರನ್ನು ಕೇಂದ್ರಕ್ಕೆ ತಂದ ಹಾಗೆ ಯಶವಂತ ಚಿತ್ತಾಲ – ಶಾಂತಿನಾಥ ದೇಸಾಯಿ ಅವರನ್ನು ಕೇಂದ್ರಕ್ಕೆ ತರಲಿಕ್ಕೆ ಏಕೆ ಆಗುತ್ತಿಲ್ಲ?

ಸಾಮಾಜಿಕ ಹೋರಾಟಗಳಲ್ಲಿ ಭಾಗವಹಿಸುವುದು ಒಂದು, ಸಾಮಾಜಿಕವಾಗಿ ಪ್ರಸ್ತುತವಾಗಿ ಬರೆಯುವುದು ಇನ್ನೊಂದು. ಇವೆರಡೂ ಅಲ್ಲದ ಅಥವಾ ಇವು ಢಾಳಾಗಿ ಕಾಣದ, ಸಾಮಾಜಿಕ ಕಾಳಜಿ ಒಳಗೊಂಡೂ ಅದು ಪ್ರಚಾರವಾಗಿ ಕಾಣಿಸದ ಲಾಯರ್‌ಗಿರಿ ಅಲ್ಲದ ಪ್ರಕಾರವೂ ಇರಬಹುದು.

ಹೋರಾಟಗಾರನಲ್ಲದವನು ಸಾಹಿತಿಯಲ್ಲ, ಸಾಹಿತಿಯಾದವನು ಹೋರಾಟಗಾರ ಆಗಿರಲೇಬೇಕು ಎನ್ನುವ ಒತ್ತಾಯ ಕಾಣಿಸ್ತಿದೆ. ನಮ್ಮ ಪಠ್ಯಪುಸ್ತಕಗಳಲ್ಲಿ, ಭಾಷಣಗಳಲ್ಲಿ, ಸೆಮಿನಾರುಗಳಲ್ಲಿ ಏನಾಗ್ತಿದೆ? ಸಾಮಾಜಿಕವಾದುದನ್ನು ನಿರಾಕರಿಸುವ ಪ್ರಯತ್ನವಲ್ಲ – ಸಾಮಾಜಿಕ ಆದುದನ್ನು ಒಳಗೊಳ್ಳುವ ಪ್ರಯತ್ನಗಳ ಕುರಿತ ಜಿಜ್ಞಾಸೆಯಿದು. ಇವತ್ತು ಅತ್ಯಾಚಾರದ ಘಟನೆಗಳ ಬಗ್ಗೆ ತಕ್ಷಣ ನೂರಾರು ಪದ್ಯಗಳು ಬರುತ್ತವೆ. ಇವೆಲ್ಲವನ್ನೂ ಒಳಗೊಂಡಿದ್ದ ಚಿತ್ತಾಲರ

ಕತೆಗಾರ, ಪ್ರಬಂಧಕಾರ
ಎಸ್. ದಿವಾಕರ್
ಅನುವಾದದಲ್ಲೂ ತಮ್ಮದೇ ಛಾಪನ್ನು ಒತ್ತಿದ ಬರಹಗಾರ. 'ಇತಿಹಾಸ', 'ಎಲ್ಲ ಬಲ್ಲವರಿಲ್ಲ ಈ ಊರಿನಲ್ಲಿ' ಅವರ ಕಥಾ ಸಂಗ್ರಹಗಳು. 'ನಾಪತ್ತೆಯಾದ ಗ್ರಾಮಾಫೋನು', 'ಕೃಷ್ಣಲೀಲೆಯಿಂದ ರಾಮರಾಜ್ಯಕ್ಕೆ' (ಪ್ರಬಂಧಗಳು), 'ಪ್ರಪಂಚ ಪುಸ್ತಕ' (ವಿಮರ್ಶಾ ಲೇಖನಗಳು), 'ಪಂಡಿತ ಭೀಮಸೇನ ಜೋಶಿ' (ವ್ಯಕ್ತಿಚಿತ್ರ) – ಪುಸ್ತಕಗಳನ್ನು ಪ್ರಕಟಿಸಿರುವ ದಿವಾಕರ್ ಅನುವಾದಿತ ಕತೆ, ಕಾದಂಬರಿಗಳ ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ.

